**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 735 |
| ಸದಸ್ಯರ ಹೆಸರು | : | ಶ್ರೀ ಕೆ.ಟಿ. ಶ್ರೀ ಕಂಠೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 17-09-2021. |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಮಂಜೂರಾದ ಪಿ.ಡಿ.ಓ. ಹುದ್ದೆಗಳೆಷ್ಟು; ಇದರಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು; (ಜಿಲ್ಲಾವಾರು ವಿವರ ಒದಗಿಸುವುದು) | ರಾಜ್ಯದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ವೃಂದದಲ್ಲಿ 6021 ಹುದ್ದೆಗಳು ಮಂಜೂರಾಗಿರುತ್ತವೆ. ಇದರಲ್ಲಿ 728 ಹುದ್ದೆಗಳು ಖಾಲಿ ಇರುತ್ತವೆ.<br><br>ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ. |
| (ಆ) | ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಯಾವಾಗ (ವಿವರ ಒದಗಿಸುವುದು) | ಪಂಚಾಯತಿ ಅಭಿವೃದ್ಧಿ ಅಧಿಕಾರಿ ವೃಂದಕ್ಕೆ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನೇಮಕಾತಿ ಪ್ರಾಧಿಕಾರ ಆಗಿದ್ದು ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್-1 ವೃಂದದ ಅರ್ಹ ನೌಕರರು ಲಭ್ಯವಾದಂತೆ ಜೇಷ್ಠತೆ ಮತ್ತು ಅರ್ಹತೆ ಆಧಾರದ ಮೇಲೆ ಮುಂಬಡ್ತಿ ಮೂಲಕ ಭರ್ತಿ ಮಾಡಲು ನಿರ್ದೇಶನ ನೀಡಲಾಗಿದೆ. |
| (ಇ) | ಪಿ.ಡಿ.ಓ. ಹುದ್ದೆಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರಕ್ಕಿದೆಯೇ; | ಹೌದು. |
| (ಈ) | ಹಾಗಿದ್ದಲ್ಲಿ ಈ ಪ್ರಸ್ತಾವನೆ ಯಾವ ಹಂತದಲ್ಲಿದೆ? (ವಿವರ ನೀಡುವುದು) | ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಜವಾಬ್ದಾರಿ ಮತ್ತು ಪ್ರಕಾರ್ಯಗಳನ್ನು ನೀಡಿರುವ ಹಿನ್ನೆಲೆಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಹುದ್ದೆಯನ್ನು ಗ್ರೂಪ್-ಬಿ ವೃಂದಕ್ಕೆ ಉನ್ನತೀಕರಿಸುವ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಕಳುಹಿಸಲಾಗಿತ್ತು. ಆರ್ಥಿಕ ಇಲಾಖೆಯ ಅಭಿಪ್ರಾಯದ ಮೇರೆಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಯನ್ನು ಗ್ರೂಪ್ ಬಿ ಹುದ್ದೆಗೆ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯನ್ನು 6ನೇ ಕರ್ನಾಟಕ ರಾಜ್ಯ ವೇತನ ಆಯೋಗದ ಮುಂದೆ ಮಂಡಿಸಲಾಗಿತ್ತು.<br><br>6ನೇ ರಾಜ್ಯ ವೇತನ ಆಯೋಗವು ತನ್ನ ವರದಿಯ 2ನೇ ಸಂಪುಟವನ್ನು ಆರ್ಥಿಕ ಇಲಾಖೆಗೆ ಸಲ್ಲಿಸಿದ್ದು, ಗ್ರಾಮ ಪಂಚಾಯತಿಗಳ ಮೇಲ್ದರ್ಜೇಗೇರಿಸುವಿಕೆ ವಿಷಯವು ಸರ್ಕಾರದ ಹಂತದಲ್ಲಿ ಅದರ ಕಾರ್ಯನಿರ್ವಹಣೆಯ ಅಗತ್ಯತೆಗಳನ್ನು ಮತ್ತು ಇತರೆ ತತ್ಸಬಂಧ ಅಂಶಗಳನ್ನು ತೀರ್ಮಾನಿಸಬೇಕಾಗುತ್ತದೆ ಎಂದು ತಿಳಿಸಿರುತ್ತದೆ.<br><br>ರಾಜ್ಯದ ಗ್ರಾಮ ಪಂಚಾಯತ್‌ಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹುದ್ದೆಯನ್ನು ಗ್ರೂಪ್ ಬಿ ಹುದ್ದೆಯನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು.<br><br>ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: FD/43/Exp-6/2021, ದಿನಾಂಕ:23-06-2021 ರಲ್ಲಿ ಸಾಮಾನ್ಯವಾಗಿ ಯಾವುದೇ ಹುದ್ದೆಯ ವೇತನ ಶ್ರೇಣಿಯನ್ನು ಆಡಳಿತದ ಶ್ರೇಣಿಕೃತ ವ್ಯವಸ್ಥೆ, ಹುದ್ದೆಯ ಕರ್ತವ್ಯ ಮತ್ತು ಜವಾಬ್ದಾರಿ, ಇತರೆ ಇಲಾಖೆಗಳಲ್ಲಿನ ಸಮಾನಾಂತರ |

| | | |
|---|---|---|
| | | ಹುದ್ದೆಗಳ ಸಾಮ್ಯತೆ, ಇತ್ಯಾದಿ ಅಂಶಗಳ ಜೊತೆಗೆ, ವೇತನ ಆಯೋಗದಂತಹ ತಜ್ಞ ಸಮಿತಿಗಳ ಶಿಫಾರಸ್ಸಿನ ಬೆಳಕಿನಲ್ಲಿ ಪರಿಶೀಲಿಸಿ ನಿರ್ಧಾರ ಕೈಗೊಳ್ಳಲಾಗುತ್ತದೆ, ಇದು ಸರ್ಕಾರದ ನೀತಿಯಾಗಿರುತ್ತದೆ.<br><br>ಪ್ರಸ್ತುತ 6ನೇ ರಾಜ್ಯ ವೇತನ ಆಯೋಗವು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹುದ್ದೆಯ ವೇತನ ಶ್ರೇಣಿಯನ್ನು ಗ್ರೂಪ್-ಸಿ ವೃಂದದಿಂದ ಗ್ರೂಪ್-ಬಿ ವೃಂದದ ವೇತನ ಶ್ರೇಣಿಯ ಹಂತಕ್ಕೆ ಪರಿಷ್ಕರಿಸಿ ಮೇಲ್ದರ್ಜೇಗೇರಿಸಲು ಯಾವುದೇ ನಿರ್ದಿಷ್ಟ ಶಿಫಾರಸ್ಸು ಮಾಡಿಲ್ಲದಿರುವುದರಿಂದ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯು ಒಪ್ಪಿರುವುದಿಲ್ಲ ಎಂದು ತಿಳಿಸಿದೆ. |

ಸಂ. ಗ್ರಾಅಪ 333 ಗ್ರಾಪಂಅ 2021

**(ಕೆ.ಎಸ್. ಈಶ್ವರಪ್ಪ)**
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

# ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:735ಕ್ಕೆ ಅನುಬಂಧ-4

| ಕ್ರಸಂ | ಜಿಲ್ಲೆಯ ಹೆಸರು | ಮಂಜೂರಾದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಸಂಖ್ಯೆ | | ಒಟ್ಟು (3+4) | ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ | | ಒಟ್ಟು (6+7) | ಖಾಲಿ ಇರುವ ಹುದ್ದೆಗಳ ಸಂಖ್ಯೆ | | ಒಟ್ಟು (9+10) |
|---|---|---|---|---|---|---|---|---|---|---|
| | | ನೇರ ನೇಮಕಾತಿ | ಮುಂಬಡ್ತಿ ಕೋಟಾ | | ನೇರ ನೇಮಕಾತಿ | ಮುಂಬಡ್ತಿ ಕೋಟಾ | | ನೇರ ನೇಮಕಾತಿ ಕೋಟಾ | ಮುಂಬಡ್ತಿ ಕೋಟಾ | |
| 1 | 2 | 3 | 4 | 5 | 6 | 7 | 8 | 9 | 10 | 11 |
| 1 | ಬಾಗಲಕೋಟೆ | 129 | 69 | **198** | 129 | 66 | **195** | 0 | 3 | **3** |
| 2 | ಬೆಂಗಳೂರು (ಗ್ರಾ) | 58 | 47 | **105** | 58 | 47 | **105** | 0 | 0 | **0** |
| 3 | ಬೆಂಗಳೂರು (ನ) | 62 | 34 | **96** | 62 | 34 | **96** | 0 | 0 | **0** |
| 4 | ಬೆಳಗಾವಿ | 329 | 177 | **506** | 300 | 146 | **446** | 29 | 31 | **60** |
| 5 | ಬಳ್ಳಾರಿ | 153 | 83 | **236** | 130 | 65 | **195** | 23 | 18 | **41** |
| 6 | ಬೀದರ್ | 120 | 65 | **185** | 113 | 40 | **153** | 7 | 25 | **32** |
| 7 | ಚಾಮರಾಜನಗರ | 84 | 46 | **130** | 83 | 20 | **103** | 1 | 26 | **27** |
| 8 | ಚಿಕ್ಕಬಳ್ಳಾಪುರ | 102 | 55 | **157** | 101 | 40 | **141** | 1 | 15 | **16** |
| 9 | ಚಿಕ್ಕಮಗಳೂರು | 148 | 79 | **227** | 122 | 58 | **180** | 26 | 21 | **47** |
| 10 | ಚಿತ್ರದುರ್ಗ | 123 | 66 | **189** | 123 | 66 | **189** | 0 | 0 | **0** |
| 11 | ದಕ್ಷಿಣ ಕನ್ನಡ | 150 | 80 | **230** | 129 | 56 | **185** | 21 | 24 | **45** |
| 12 | ದಾವಣಗೆರೆ | 127 | 69 | **196** | 127 | 28 | **155** | 0 | 41 | **41** |
| 13 | ಧಾರವಾಡ | 94 | 50 | **144** | 93 | 32 | **125** | 1 | 18 | **19** |
| 14 | ಗದಗ | 79 | 43 | **122** | 72 | 27 | **99** | 7 | 16 | **23** |
| 15 | ಹಾಸನ | 174 | 93 | **267** | 165 | 93 | **258** | 9 | 0 | **9** |
| 16 | ಹಾವೇರಿ | 146 | 78 | **224** | 146 | 45 | **191** | 0 | 33 | **33** |
| 17 | ಕಲಬುರಗಿ | 172 | 92 | **264** | 153 | 32 | **185** | 19 | 60 | **79** |
| 18 | ಕೊಡಗು | 68 | 36 | **104** | 61 | 19 | **80** | 7 | 17 | **24** |
| 19 | ಕೋಲಾರ | 101 | 55 | **156** | 95 | 38 | **133** | 6 | 17 | **23** |
| 20 | ಕೊಪ್ಪಳ | 99 | 54 | **153** | 92 | 48 | **140** | 7 | 6 | **13** |
| 21 | ಮಂಡ್ಯ | 151 | 82 | **233** | 147 | 73 | **220** | 4 | 9 | **13** |
| 22 | ಮೈಸೂರು | 173 | 93 | **266** | 173 | 93 | **266** | 0 | 0 | **0** |
| 23 | ರಾಯಚೂರು | 116 | 63 | **179** | 100 | 56 | **156** | 16 | 7 | **23** |
| 24 | ರಾಮನಗರ | 83 | 44 | **127** | 80 | 44 | **124** | 3 | 0 | **3** |
| 25 | ಶಿವಮೊಗ್ಗ | 176 | 95 | **271** | 151 | 87 | **238** | 25 | 8 | **33** |
| 26 | ತುಮಕೂರು | 215 | 116 | **331** | 184 | 105 | **288** | 31 | 12 | **43** |
| 27 | ವಿಜಯಪುರ | 138 | 75 | **213** | 137 | 72 | **209** | 1 | 3 | **4** |
| 28 | ಉಡುಪಿ | 103 | 55 | **158** | 85 | 55 | **140** | 18 | 0 | **18** |
| 29 | ಉತ್ತರ ಕನ್ನಡ | 150 | 81 | **231** | 147 | 38 | **185** | 3 | 43 | **46** |
| 30 | ಯಾದಗಿರಿ | 80 | 43 | **123** | 76 | 37 | **113** | 4 | 6 | **10** |
| | **ಒಟ್ಟು** | **3903** | **2118** | **6021** | **3634** | **1660** | **5293** | **269** | **459** | **728** |